# ಜ್ಞಾನದ ಅನ್ಯಾಯ

## ಪೀಠಿಕೆ

ಈ ಪುಸ್ತಕವು ಒಂದು ನಿರ್ದಿಷ್ಠ ರೀತಿಯ ಜ್ಞಾನಸಂಬಂಧಿ ಅನ್ಯಾಯ ಎಂಬುದಿದೆ ಎಂದು ವಾದಿಸುತ್ತದೆ. ಜ್ಞಾನ ಸಂಬಂಧಿ ಅನ್ಯಾಯ ಎನ್ನುವುದರ ಅಡಿಯಲ್ಲಿ ಹಲವು ರೀತಿಯ ಸಂಗತಿಗಳನ್ನು ಪರಿಶೀಲಿಸಬಹುದು. ಸಾಮಾನ್ಯವಾಗಿ ನಾವು ತತ್ವಶಾಸ್ತ್ರದಲ್ಲಿ ನ್ಯಾಯದ ಕುರಿತು ಚಿಂತಿಸುವ ರೀತಿಯಲ್ಲಿ ನೋಡಿದರೆ, ಜ್ಞಾನಸಂಬಂಧಿ ಅನ್ಯಾಯ ಎನ್ನುವುದು ಮಾಹಿತಿ ಮತ್ತು ಶಿಕ್ಷಣದಂತಹ ಜ್ಞಾನ ಸಾಮಗ್ರಿಗಳ ಹಂಚಿಕೆಯಲ್ಲಿ ಇರಬಹುದಾದ ತಾರತಮ್ಯ ಎಂದು ಮೊದಲ ನೋಟಕ್ಕೆ ಕಾಣಿಸಬಹುದು. ಇಂತಹ ಸಂದರ್ಭಗಳಲ್ಲಿ ನಾವು ಜ್ಞಾನವೇ ಮುಂತಾದ ಹಲವು ಸಾಮಗ್ರಿಗಳನ್ನು ಬಯಸುವ ಸಾಮಾಜಿಕ ವ್ಯಕ್ತಿಗಳನ್ನು ಚಿತ್ರಿಸಿಕೊಳ್ಳಬಹುದು. ಅಂಥವರಲ್ಲಿ ಎಲ್ಲರಿಗೂ ಸಮಪಾಲು ದೊರೆಯುತ್ತಿದೆಯೇ ಎಂದೂ ಕೇಳಿಕೊಳ್ಳಬಹುದು. ಜ್ಞಾನಸಂಬಂಧಿ ಅನ್ಯಾಯ ಎನ್ನುವುದನ್ನು ಈ ರೀತಿಯಲ್ಲಿ ನೋಡಿದರೆ, ಇದರಲ್ಲಿ ನಿರ್ದಿಷ್ಟವಾಗಿ ಜ್ಞಾನರೂಪಿಯಾದದ್ದು ಅಥವಾ ಜ್ಞಾನಕ್ಕೆ ಸಂಬಂಧಿಸಿದ್ದು ಏನೂ ಇಲ್ಲ ಎಂದೇ ತೋರುತ್ತದೆ. ಯಾಕೆಂದರೆ, ಇಲ್ಲಿ ವ್ಯಕ್ತಿಗಳು ಬಯಸುತ್ತಿರುವ ಒಳಿತೇನಿದೆ ಅದು ಜ್ಞಾನಕ್ಕೆ ಸಂಬಂಧಿಸಿದ್ದು ಎನ್ನುವುದು ಕೇವಲ ಸಾಂದರ್ಭಿಕವಾದದ್ದಷ್ಟೆ. ಇದಕ್ಕೆ ಬದಲಾಗಿ, ನಿರ್ದಿಷ್ಟವಾಗಿ ಜ್ಞಾನಕ್ಕೆ ಸಂಬಂಧಿಸಿದ ಎರಡು ರೀತಿಯ ಜ್ಞಾನದ ಅನ್ಯಾಯಗಳನ್ನು ಕುರಿತು ವಿವರಿಸುವುದು ಈ ಪುಸ್ತಕದ ಉದ್ದೇಶ. ಅದೂ ವಿಶೇಷವಾಗಿ, ಜ್ಞಾತೃವಾಗಿರುವ ಸ್ಥಾನದಲ್ಲಿದ್ದು ಒಬ್ಬ ವ್ಯಕ್ತಿಗೆ ಎಸಗಬಹುದಾದ ಅನ್ಯಾಯವನ್ನು ವಿವರಿಸುವುದು ಇಲ್ಲಿನ ಉದ್ದೇಶ. ಅದನ್ನು ನಾನು ಸಾಕ್ಷಿ-ಸ್ಥಿತಿಯ ಅನ್ಯಾಯ ಮತ್ತು ವ್ಯಾಖ್ಯಾನ-ಸ್ಥಿತಿಯ ಅನ್ಯಾಯ ಎಂದು ಕರೆಯುತ್ತೇನೆ. ಸಾಕ್ಷಿ-ಸ್ಥಿತಿಯ ಅನ್ಯಾಯ ಎಂದರೆ ಒಬ್ಬ ಸಾಕ್ಷಿಯ ಕುರಿತು ಕೇಳುಗರಿಗೆ ಇರುವ ಪೂರ್ವಾಗ್ರಹಗಳ ಕಾರಣದಿಂದ ಆ ಸಾಕ್ಷಿಯ ಮಾತಿಗೆ ಕಡಿಮೆ ಮಾನ್ಯತೆಯನ್ನು ಕೊಡುವುದು. ವ್ಯಾಖ್ಯಾನ-ಸ್ಥಿತಿಯ ಅನ್ಯಾಯ ಎನ್ನುವುದು ಇದಕ್ಕಿಂತ ಒಂದು ಹೆಜ್ಜೆ ಮೊದಲೇ ಆಗುವಂಥದ್ದು: ನಮ್ಮ ವ್ಯಾಖ್ಯಾನದ ಸಾರ್ವತ್ರಿಕ ಸಂಪನ್ಮೂಲಗಳಲ್ಲಿ ಇರುವ ಕೊರತೆಯ ಕಾರಣದಿಂದ ಕೆಲವರ ಸಾಮಾಜಿಕ ಅನುಭವವನ್ನು ಅರ್ಥ ಮಾಡಿಕೊಳ್ಳುವುದೇ ಕಷ್ಟವಾಗಿ ಆ ಮೂಲಕ ಅಂಥವರಿಗೆ ಅನ್ಯಾಯವಾಗಿ ಅಪಚಾರವಾಗುವುದು. ಇದರಲ್ಲಿ ಮೊದಲ ರೀತಿಗೆ ಉದಾಹರಣೆಯೆಂದರೆ, ಒಬ್ಬ ವ್ಯಕ್ತಿ ಕರಿಯ ಜನಾಂಗಕ್ಕೆ ಸೇರಿದವನು ಎನ್ನುವ ಕಾರಣಕ್ಕೆ ಪೊಲೀಸರು ಅಂಥವನ ಮಾತನ್ನು ನಂಬದೇ ಹೋಗುವುದು. ಎರಡನೆಯ ರೀತಿಗೆ, ಒಂದು ಸಂಸ್ಕೃತಿಯಲ್ಲಿ ಕೆಲವು ರೀತಿಯ ಪರಿಕಲ್ಪನೆಗಳು, ಸಂವೇದನೆಗಳು ಇನ್ನೂ ಬೆಳೆದಿಲ್ಲವಾಗಿ ಕೆಲವರು ಲೈಂಗಿಕ ಕಿರುಕುಳವನ್ನು ಅನುಭವಿಸುವುದು. ಸಾಕ್ಷಿ-ಸ್ಥಿತಿಯ ಅನ್ಯಾಯ ಎನ್ನುವುದು ನಂಬಿಕೆಯ ವ್ಯವಸ್ಥೆಯಲ್ಲಿ ಇರುವ ಕೊರತೆಯಿಂದ ಉಂಟಾಗುವಂಥದ್ದು.

ಹಾಗೆಯೇ ವ್ಯಾಖ್ಯಾನ-ಸ್ಥಿತಿಯ ಅನ್ಯಾಯ ಎನ್ನುವುದು ಸಾಮುದಾಯಿಕವಾಗಿ ನಮ್ಮ ವ್ಯಾಖ್ಯಾನಗಳ ಸಂಪನ್ಮೂಲಗಳಲ್ಲಿ ಇರಬಹುದಾದ ವ್ಯವಸ್ಥಿತ ಪೂರ್ವಗ್ರಹಗಳಿಂದ ಉಂಟಾಗುವಂಥದ್ದು.

ಇಲ್ಲಿನ ಒಟ್ಟಾರೆ ಉದ್ದೇಶವೆಂದರೆ ನಮ್ಮ ನಿತ್ಯಜೀವನದ ಎರಡು ಸಾಮಾನ್ಯ ಜ್ಞಾನವ್ಯಾಪಾರಗಳಲ್ಲಿ ಇರುವ ನೈತಿಕ ಆಯಾಮಗಳ ಮೇಲೆ ಬೆಳಕು ಚೆಲ್ಲುವುದು: ಮಾತಿನ ಮೂಲಕ ಇತರರಿಗೆ ಜ್ಞಾನವನ್ನು ತಲುಪಿಸುವುದು, ಹಾಗೂ ನಮ್ಮದೇ ಸಾಮಾಜಿಕ ಅನುಭವಗಳನ್ನು ಅರ್ಥ ಮಾಡಿಕೊಳ್ಳುವುದು. ಇದರಲ್ಲಿರುವ ನೈತಿಕ ಪ್ರಶ್ನೆಗಳು ಜ್ಞಾನವ್ಯಾಪಾರಗಳಲ್ಲಿ ಇರಬಹುದಾದ ಸಾಮಾಜಿಕ ಅಧಿಕಾರದ ನಡಾವಳಿಗಳ ಕಾರಣದಿಂದ ಹುಟ್ಟುವುದರಿಂದ, ಅವುಗಳನ್ನು ತೋರಿಸುವುದರಲ್ಲೇ ಜ್ಞಾನ ವ್ಯಾಪಾರಗಳಲ್ಲಿ ಇರುವ ರಾಜಕಾರಣವನ್ನೂ ತೋರಿಸಿದಂತಾಗುತ್ತದೆ. ನಮ್ಮ ಜ್ಞಾನ ಸಂಬಂಧಗಳನ್ನು ಕುರಿತು ಹೇಗೆ ಯೋಚಿಸುತ್ತೇವೆ ಎನ್ನುವಂಥ ರಾಜಕಾರಣದ ಸಾಧ್ಯತೆ ಇರುವ ವಿಚಾರಗಳು - ಉದಾಹರಣೆಗೆ, ಇತರರ ಜ್ಞಾನದ ಮೇಲೆ ವಿಶ್ವಾಸವಿರಿಸುವ ಸಂಗತಿಯ ಜೊತೆ ಸಾಮಾಜಿಕ ಅಧಿಕಾರದ ಪ್ರಶ್ನೆಗಳು ಅನಿವಾರ್ಯವಾಗಿ ತಳುಕು ಹಾಕಿಕೊಂಡಿರುವುದು ಅಥವಾ ಸಾಮಾಜಿಕ ವೈಕಲ್ಯಗಳು ಜ್ಞಾನ ವೈಕಲ್ಯಗಳನ್ನು ಉಂಟುಮಾಡಬಹುದಾದ್ದು - ಸಾಮಾನ್ಯವಾಗಿ ಆಂಗ್ಲೋ ಅಮೇರಿಕನ್ ಜ್ಞಾನಶಾಸ್ತ್ರದ ಸಂದರ್ಭದಲ್ಲಿ ಹೆಚ್ಚಾಗಿ ಕಾಣಿಸುವುದಿಲ್ಲ. ಇದಕ್ಕೆ ಕಾರಣ ಬಹುಶಃ ಈ ರೀತಿಯ ವಿಚಾರಗಳು ಅನಿವಾರ್ಯವಾಗಿ ಒಂದು ಸಾಪೇಕ್ಷತಾವಾದಿ ಭಾವನೆಯೊಂದಿಗೆ ತಳುಕು ಹಾಕಿಕೊಂಡಿರುವಂಥದ್ದು, ಮತ್ತು ಇಂತಹ ವಿಚಾರಗಳು ಕೊನೆಗೆ ಪೋಸ್ಟ್ ಮಾಡರ್ನಿಸಂನಂತಹ ಚಿಂತನೆಯಲ್ಲೇ ತುದಿ ಮುಟ್ಟುವಂಥದ್ದು ಎನ್ನುವ ಗುಮಾನಿ. ವ್ಯಕ್ತಿನಿಷ್ಠ ವಿವರಣಾ ಮಾದರಿಗಳ ಪ್ರಾಬಲ್ಯ ಮತ್ತು ವೈಚಾರಿಕ ಆದರ್ಶ ಮಾದರಿಗಳನ್ನೇ ಆಧಾರವಾಗಿ ಇಟ್ಟುಕೊಂಡು ಜ್ಞಾನಶಾಸ್ತ್ರ ಪಾರಂಪರಿಕವಾಗಿ ಬೆಳೆದುಬಂದಿರುವುದರಿಂದ ಈ ರೀತಿಯ ಪ್ರಶ್ನೆಗಳು ಮುಖ್ಯಧಾರೆಯ ಜ್ಞಾನಶಾಸ್ತ್ರಕ್ಕೆ ಪ್ರಸ್ತುತ ಎಂದು ತೋರುವುದು ಕಷ್ಟವೇ ಸರಿ. ಇಂತಹ ಕಾರಣಗಳು ಏನೇ ಇರಲಿ, ಈ ಪುಸ್ತಕದ ವಾದವೇನೆಂದರೆ ಪಾರಂಪರಿಕವಾಗಿ ನಡೆದುಕೊಂಡು ಬಂದಿರುವ ಜ್ಞಾನಶಾಸ್ತ್ರೀಯ ಚರ್ಚೆಗಳು ನಮ್ಮ ಜ್ಞಾನ ವ್ಯವಹಾರಗಳಲ್ಲಿ ಅಡಕವಾಗಿರಬಹುದಾದ ನೈತಿಕ ಮತ್ತು ರಾಜಕೀಯ ಆಯಾಮಗಳನ್ನು ತೋರಿಸಲು ಬೇಕಾದ ಸೈದ್ಧಾಂತಿಕ ಚೌಕಟ್ಟುಗಳನ್ನು ಬೆಳೆಸದೇ ಇರುವುದು ಒಂದು ಊನವೆಂದೇ ಹೇಳಬೇಕು. ಆಂಗ್ಲೋ-ಅಮೇರಿಕನ್ ಪರಂಪರೆಯಲ್ಲಿ, ಇದಕ್ಕೆ ಏಕೈಕ ಅಪವಾದ ಎನ್ನುವ ರೀತಿಯಲ್ಲಿ ಸ್ತ್ರೀವಾದಿ ಜ್ಞಾನಶಾಸ್ತ್ರ ಮಾತ್ರ ಈ ವಿಚಾರವನ್ನು ವಾದಿಸಿಕೊಂಡು ಬಂದಿದೆ. ಆದರೆ, ನಾನು ಇಲ್ಲಿ ತೋರಿಸಲು ಇಚ್ಚಿಸುವಂತೆ ಈ ವಿಚಾರಗಳನ್ನು ಅಚ್ಚುಕಟ್ಟಾಗಿ ಚರ್ಚಿಸಲು ಗುಣ-ಜ್ಞಾನಶಾಸ್ತ್ರದ (virtue epistemology) ಪರಿಕಲ್ಪನೆಗಳು ಒಂದು ಉಪಯುಕ್ತ ಪರಿಭಾಷೆಯನ್ನು ಒದಗಿಸುತ್ತವೆ.

ನೀತಿಶಾಸ್ತ್ರದಲ್ಲೂ ಇಂಥದೇ ಒಂದು ಕುರುಡುತನವನ್ನು ಕಾಣುತ್ತೇವೆ. ನಾವು ಹೇಳುತ್ತಿರುವ ಜ್ಞಾನವ್ಯವಹಾರದ ವಿಚಾರವನ್ನು ಪಾರಂಪರಿಕವಾಗಿ ನೀತಿಶಾಸ್ತ್ರವೂ ಕೂಡ ಗಮನಿಸಿಲ್ಲ ಎನ್ನುವುದು

ದುರ್ದೈವವೇ ಸರಿ. ಆದರೆ ನೀತಿಶಾಸ್ತ್ರದ ಮಟ್ಟಿಗೆ ಹೇಳುವುದಾದರೆ, ನಮ್ಮ ಜ್ಞಾನ ವ್ಯವಹಾರದ ಬದುಕಿನಲ್ಲಿ ಆಗಬಹುದಾದ ಸರಿತಪ್ಪುಗಳ ಕುರಿತ ಅವಜ್ಞೆ ಸಾಂದರ್ಭಿಕವಾದದ್ದೇ ಹೊರತೂ ಅದರ ಕುರಿತು ಒಂದು ನಿರ್ದಿಷ್ಟ ಟೀಕೆಯನ್ನು ಬೆಳೆಸಲು ಬರುವಂಥದ್ದಲ್ಲ. ಹೆಚ್ಚೆಂದರೆ, ಐತಿಹಾಸಿಕವಾಗಿ ನೀತಿಶಾಸ್ತ್ರ ದ್ವಿತೀಯ ಸ್ತರದ ವಿವರಣೆಗಳ ಕುರಿತೇ ಹೆಚ್ಚು ಆಸಕ್ತಿ ಹೊಂದಿರುವುದರಿಂದ ಇಂಥ ಪರಿಸ್ಥಿತಿ ಉಂಟಾಗಿರಬಹುದು ಎಂದು ಹೇಳಬಹುದು. ಹೇಗೆ ನೋಡಿದರು, ಇಂತಹ ಪಾರಂಪರಿಕ ಮಿತಿಗಳ ಕಾರಣದಿಂದ, ಈ ಪುಸ್ತಕ ನೇರವಾಗಿ ನೀತಿಶಾಸ್ತ್ರದ ಪುಸ್ತಕವೂ ಅಲ್ಲ ಅಥವಾ ನೇರವಾಗಿ ಜ್ಞಾನಶಾಸ್ತ್ರದ ಪುಸ್ತಕವೂ ಅಲ್ಲ. ಬದಲಾಗಿ, ತತ್ವಶಾಸ್ತ್ರದ ಈ ಎರಡು ಸೀಮೆಗಳ ನಡುವಿನ ಗಡಿಯ ಒಂದು ಭಾಗವನ್ನು ನಿಭಾಯಿಸುವ ರೀತಿಯದ್ದು.

ಹಲವರು ತತ್ವಶಾಸ್ತ್ರಜ್ಞರಿಗೆ, ಅದರಲ್ಲೂ ವಿಶೇಷವಾಗಿ ಸ್ತ್ರೀವಾದಿಗಳಿಗೆ, ನಮ್ಮ ಜ್ಞಾನವ್ಯವಹಾರಗಳಲ್ಲಿರುವ ನೈತಿಕ ಮತ್ತು ರಾಜಕೀಯ ಆಯಾಮಗಳನ್ನು ಕುರಿತು ಚಿಂತಿಸಲು ಒಂದು ಉಪಯುಕ್ತ ತಾತ್ವಿಕ ಸಾಹಿತ್ಯವಾಗಿ ಕಂಡಿದ್ದು ಪೋಸ್ಟ್ ಮಾಡರ್ನಿಸಂ. ಪೋಸ್ಟ್ ಮಾಡರ್ನಿಸ್ಟ್ ತಾತ್ವಿಕ ಚಿಂತನೆ ಅಷ್ಟು ಅಪ್ಯಾಯಮಾನವಾಗುವುದಕ್ಕೆ ಒಂದು ಅತೀ ಮುಖ್ಯ ಕಾರಣ  ಬುದ್ಧಿ ಮತ್ತು ಜ್ಞಾನವನ್ನು ಮುದ್ದಾಮಾಗಿ ಸಾಮಾಜಿಕ ಅಧಿಕಾರದ ಮೂಸೆಯಲ್ಲಿ ಇಟ್ಟು ನೋಡುವ ಅದರ ಪರಿಪಾಠ. ಇದರಿಂದ ಬುದ್ಧಿಯ ಪಾರಮ್ಯದ ಕುರಿತು ಮೊದಲಿನಿಂದಲೂ ಇದ್ದ ಸಂದೇಹಗಳನ್ನು ಅದರ ರಾಜಕೀಯ ಆಯಾಮಗಳ ಸಹಿತವಾಗಿ ಚರ್ಚಿಸುವ ಒಂದು ಹೊಸದಾದ ತೀವ್ರವಾದಿ ವೇದಿಕೆ ದೊರೆತಂತಾಯಿತು. ಆದರೆ, ಬರಬರುತ್ತಾ ಈ ಆಶಾವಾದವೂ ಹುಸಿಯಾಯಿತು. ಏಕೆಂದರೆ ಪೋಸ್ಟ್ ಮಾಡರ್ನಿಸಂನ ತೀವ್ರವಾದೀ ಸ್ವಭಾವಗಳು ಹಲವಾರು ಬಾರಿ ಸರಳೀಕೃತ ಚಿಂತನೆಗೆ ದಾರಿ ಮಾಡಿಕೊಟ್ಟಿತು. ಪೋಸ್ಟ್ ಮಾಡರ್ನಿಸಂನ ನಿಜವಾದ ಚಾಲಕ ಶಕ್ತಿ ಇರುವುದು ಬುದ್ಧಿಯ ಅವಾಸ್ತವಿಕ ಮಾದರಿಗಳ ಬಗೆಗಿನ ಭ್ರಮನಿರಸನದಲ್ಲಿಯೇ ಹೊರತೂ ಬುದ್ಧಿಗೂ ಸಾಮಾಜಿಕ ಅಧಿಕಾರಕ್ಕೂ ನಡುವಿನ ತಳುಕುಗಳಲ್ಲಿ ಇರಬಹುದಾದ ನ್ಯಾಯ ಅನ್ಯಾಯದ ಪ್ರಶ್ನೆಗಳನ್ನು ಎತ್ತುವುದರಲ್ಲಲ್ಲ. ಬುದ್ಧಿಯ ಕಲ್ಪನೆಯ ಕುರಿತೇ ಗುಮಾನಿ, ಮತ್ತು ಅದನ್ನು ಕೇವಲ ಅಧಿಕಾರದ ಒಂದು ಪರಿಣಾಮ ಎಂದು ನೋಡುವ ಕ್ರಮ ವಾಸ್ತವದಲ್ಲಿ ಅಧಿಕಾರ ಹೇಗೆ ಬುದ್ಧಶೀಲ ವ್ಯಕ್ತಿಗಳಾದ ನಮ್ಮ ಮೇಲೆ ಪರಿಣಾಮ ಬೀರುತ್ತದೆ ಎಂದು ನಾವು ನಿಜಕ್ಕೂ ಕೇಳಬೇಕಿರುವ ಪ್ರಶ್ನೆಗಳನ್ನು ಕೇಳುವುದನ್ನೇ ಅಸಾಧ್ಯವಾಗಿಸುತ್ತವೆ. ಇಂತಹ ಕ್ರಮ ನಾವು ಯೋಚಿಸಲು ಇರುವ ಕಾರಣಗಳು ಮತ್ತು ನಮ್ಮ ಯೋಚನೆಗಳನ್ನು ಅಧಿಕಾರ ಸಂಬಂಧಗಳು ಪ್ರಭಾವಿಸುವ ಕ್ರಮಗಳ ನಡುವಿನ ವ್ಯತ್ಯಾಸವನ್ನೇ ಮರೆಯಾಗಿಸುತ್ತವೆ, ಅಥವಾ ಕನಿಷ್ಟಪಕ್ಷ ಮಸುಕಾಗಿಸುತ್ತವೆ. ನಮ್ಮ ಜ್ಞಾನ ವ್ಯವಹಾರಗಳಲ್ಲಿ ನ್ಯಾಯದ ಪ್ರಶ್ನೆ ಹೇಗೆ ಏಳುತ್ತದೆ ಎಂದು ತಿಳಿದುಕೊಳ್ಳಬೇಕೆಂದರೆ, ಇಂತಹ ಸರಳೀಕರಣದ ಕ್ರಮ ಒಬ್ಬರ ಮಾತನ್ನು ಸಕಾರಣವಾಗಿ ನಿರಾಕರಿಸುವುದಕ್ಕೂ ಮತ್ತು ಕೇವಲ ಪೂರ್ವಾಗ್ರಹದ ಕಾರಣಕ್ಕೆ ನಿರಾಕರಿಸುವುದಕ್ಕೂ ಇರುವ ವ್ಯತ್ಯಾಸವನ್ನೇ ಮಸುಕಾಗಿಸುತ್ತದೆ. ಜ್ಞಾನವ್ಯವಹಾರಗಳಲ್ಲಿ ನ್ಯಾಯ ಮತ್ತು ಅಧಿಕಾರದ

ಪ್ರಶ್ನೆಯನ್ನು ಎತ್ತಲು ಬೇಕಾದ ಬೌದ್ಧಿಕ ಅವಕಾಶವನ್ನು ಸಾಧ್ಯವಾಗಿಸುವ ಬದಲು, ಪೋಸ್ಟ್ ಮಾಡರ್ನ್ ಚಿಂತನೆ ಇಂತಹ ಪ್ರಶ್ನೆಗಳನ್ನು ಕೇಳುವುದನ್ನೇ ಅಸಾಧ್ಯವಾಗಿಸಿತು. ಹಾಗಾಗಿ ಅದು ಜ್ಞಾನದ ಕುರಿತು ಏನು ಹೇಳಬೇಕಿತ್ತೋ ಅದು ಕೊನೆಗೂ ಒಂದು ಪ್ರಗತಿಪರ ದಿಕ್ಕಿನಲ್ಲಿ ಸಾಗುವ ಬದಲು ಸಾಂಪ್ರದಾಯಿಕತೆಯ ಕಡೆಗೆ ಹೊರಳಿತು.

ಹಾಗಂದಮಾತ್ರಕ್ಕೆ, ನಾವು ಒಂದು ಕಾಲದಲ್ಲಿ ಪೋಸ್ಟ್‌ಮಾಡರ್ನ್ ಗದ್ದಲವಿದ್ದ ಜಾಗದಲ್ಲಿ ಈಗ ಕೇವಲ ಮೌನಕ್ಕೆ ಶರಣಾಗಬಾರದು. ಸಾಮಾಜಿಕ ಅಧಿಕಾರದೊಡನೆ ನಮ್ಮ ಚಿಂತನೆ ಹೇಗೆ ತಳುಕು ಹಾಕಿಕೊಂಡಿದೆ ಎಂದು ತಿಳಿಯಲು ಖಂಡಿತವಾಗಿಯೂ ಇದಕ್ಕಿಂತ ಉತ್ತಮ ಮಾರ್ಗಗಳು ಇದ್ದೇ ಇರಬೇಕು. ಇಂತಹ ಚರ್ಚೆಗಳು ಯಾವ ರೀತಿಯಲ್ಲಿ ಇರಬೇಕು ಎಂದು ನಾವು ಕೇಳಿಕೊಳ್ಳಬೇಕು. ಇದಕ್ಕೆ ಒಂದು ಉತ್ತರವೇನೆಂದರೆ, ನಮ್ಮ ಜ್ಞಾನವ್ಯವಹಾರಗಳನ್ನು ಸಾಮಾಜಿಕ ಸಂದರ್ಭಗಳ ಹಿನ್ನೆಲೆಯಲ್ಲಿ ವಿವರಿಸುವಾಗ ಪ್ರಾಥಮಿಕ ಮಟ್ಟದ ನೈತಿಕ ಪ್ರಶ್ನೆಗಳನ್ನು ಕೇಳುವುದಾಗಬೇಕು. ನಮ್ಮ ಜ್ಞಾನವ್ಯವಹಾರಗಳನ್ನು ಸಾಮಾಜಿಕ ಸಂದರ್ಭಗಳ ಹಿನ್ನೆಲೆಯಲ್ಲಿ ವಿವರಿಸುವುದು ಎಂದರೆ, ಅದರಲ್ಲಿ ಭಾಗಿಯಾದವರನ್ನು ಕೇವಲ ಆದರ್ಶ ಮಾದರಿಗಳಾಗಿ, ಮುಖ್ಯವಾಹಿನಿಯ ಜ್ಞಾನಶಾಸ್ತ್ರದಲ್ಲಿ ಮತ್ತು ಸಾಮಾಜಿಕ ಜ್ಞಾನಶಾಸ್ತ್ರದಲ್ಲಿ ಚಿತ್ರಿಸುವಂತೆ, ಸಾಮಾಜಿಕ ಅಧಿಕಾರದ ಸಂಬಂಧಗಳಿಂದ ಸ್ವತಂತ್ರರಾಗಿರುವಂತೆ ಚಿತ್ರಿಸುವುದಲ್ಲ. ಬದಲಾಗಿ, ಪರಸ್ಪರ ಅಧಿಕಾರದ ಸಂಬಂಧದ ಮೂಲಕ ಬೆಸೆದುಕೊಂಡಿರುವ ಸಾಮಾಜಿಕ ರೂಪಗಳು ಎನ್ನುವಂತೆ ನೋಡಬೇಕು. ಇಂತಹ ಸಾಮಾಜಿಕವಾಗಿಪ್ರಸ್ತುತವಾದ ಈ ಪರಿಕಲ್ಪನೆ ನಾವು ಜ್ಞಾನಶಾಸ್ತ್ರೀಯ ವ್ಯವಹಾರಗಳನ್ನು ವಿವರಿಸುವಾಗ ಅಧಿಕಾರದ ಪ್ರಶ್ನೆಯನ್ನು ಮತ್ತು ಕೆಲವೊಮ್ಮೆ ವೈಚಾರಿಕವೂ ಇನ್ನು ಕೆಲವೊಮ್ಮೆ ಅವೈಚಾರಿಕವೂ ಆದ ಅದರ ಗತಿಯನ್ನು ಸಹಜವಾಗಿಯೇ ಮೇಲ್ಪದರಕ್ಕೆ ತಂದು ತೋರುತ್ತದೆ. ಹಲವಾರು ತಾತ್ವಿಕ ಪ್ರಶ್ನೆಗಳ ಸಂದರ್ಭದಲ್ಲಿ ಇಂತಹ ಶಾಸ್ತ್ರೀಯವಾದ, ಅತೀ ಆದರ್ಶ ಮಾದರಿಯ ಮನುಷ್ಯ ವ್ಯಕ್ತಿಯ ಚಿತ್ರಣವೇ ಉಪಯೋಗಕ್ಕೆ ಬರಬಹುದು. ಆದರೆ, ಆ ಮಾದರಿಗೆ ನಮ್ಮನ್ನು ಸೀಮಿತವಾಗಿಸಿಕೊಳ್ಳುವುದರಿಂದ ನಾವು ಕೇಳಬಹುದಾದ ತಾತ್ವಿಕ ಪ್ರಶ್ನೆಗಳು ಮತ್ತು ಪಡೆಯಬಹುದಾದ ಒಳನೋಟಗಳು ತುಂಬಾ ಸೀಮಿತವಾಗುತ್ತದೆ. ಪರಿಣಾಮವಾಗಿ ನಮ್ಮ ತಾತ್ವಿಕ ಸಾಧ್ಯತೆಗಳ ಭಂಡಾರವೇ ಅನಗತ್ಯವಾಗಿ ಬಡವಾಗುತ್ತದೆ. ಅದೇ, ಸಾಮಾಜಿಕ ಸಂದರ್ಭಗಳ ಪರಿಕಲ್ಪನೆಯಿಂದ ಹೊರಟರೆ, ನಮ್ಮ ಜ್ಞಾನ ವ್ಯವಹಾರಗಳಲ್ಲಿ ಹಾಸುಹೊಕ್ಕಾಗಿರುವ ನೈತಿಕ ಆಯಾಮಗಳನ್ನು ಗುರುತಿಸುವ ಸಲುವಾಗಿ ಅಧಿಕಾರ, ಚಿಂತನೆ, ಮತ್ತು ಜ್ಞಾನದ ಪ್ರಾಮಾಣ್ಯಗಳ ನಡುವಿನ ಪರಸ್ಪರ ಅವಲಂಬನೆಯ ಸಂಬಂಧವನ್ನು ಕಾಣುವುದು ಸಾಧ್ಯವಾಗುತ್ತದೆ. ಕೊನೆಗೂ, ನಮ್ಮ ಗುರಿ ಏನೆಂದರೆ, ನಮ್ಮ ಜ್ಞಾನ ವ್ಯವಹಾರ ಹೆಚ್ಚು ವಿವೇಕಯುತವಾಗಿಯೂ ಹೆಚ್ಚು ನ್ಯಾಯಯುತವಾಗಿಯೂ ಇರುವಂತೆ ಮಾಡುವುದು ಹೇಗೆ ಎನ್ನುವುದು.

ಇಡೀ ಪುಸ್ತಕದಲ್ಲಿ ನಾನು ಸಾಮಾಜಿಕ ಅಧಿಕಾರ ಎನ್ನುವ ಪರಿಕಲ್ಪನೆಯನ್ನು ಬಳಸುತ್ತೇನೆ. ಹಾಗಾಗಿ, ಮೊದಲ ಅಧ್ಯಾಯದಲ್ಲಿ ಇದರ ಕುರಿತು ಒಂದು ಪ್ರಾಯೋಗಿಕ ಕಲ್ಪನೆಯನ್ನು ರೂಪಿಸುವುದು ನನ್ನ ಮೊದಲ ಕೆಲಸ. ನಾನು ರೂಪಿಸುವ ಕಲ್ಪನೆ ಬಹಳ ಸ್ಥೂಲವಾದದ್ದು. ಅದರ ಕೇಂದ್ರ ವಿಚಾರ ಏನೆಂದರೆ ಅಧಿಕಾರ ಎನ್ನುವುದು ಮಿಕ್ಕವರ ಚಟುವಟಿಕೆಗಳನ್ನು ನಿಯಂತ್ರಿಸಲು ಸಾಧ್ಯವಾಗುವ ಒಂದು ಸಾಮಾಜಿಕ ಸಂದರ್ಭಾಧಾರಿತ ಶಕ್ತಿ. ನಂತರ ಸಾಮಾಜಿಕ ಅಧಿಕಾರದ ಒಂದು ಉಪಜಾತಿಯನ್ನು ಪರಿಚಯಿಸಿ ಅದನ್ನು ಅಸ್ಮಿತೆಯ ಅಧಿಕಾರ ಎಂದು ಕರೆಯುತ್ತೇನೆ. ಇದು ಅಧಿಕಾರದ ನಿರ್ದಿಷ್ಟ ಸಂದರ್ಭಗಳಲ್ಲಿ ಪಾಲುಗೊಳ್ಳುವವರ ಸಾಮಾಜಿಕ ಅಸ್ಮಿತೆಗಳ ಒಂದು ಸಾಮಾನ್ಯ ಸಾಮಾಜಿಕ ಕಲ್ಪನೆಯ ಮೇಲೆ ನೇರವಾಗಿ ಅವಲಂಬಿತವಾದ ಒಂದು ರೀತಿಯ ಸಾಮಾಜಿಕ ಅಧಿಕಾರ. ಮೊದಲ ಅಧ್ಯಾಯದ ಮಿಕ್ಕ ಭಾಗ ಪುಸ್ತಕದ ಮುಖ್ಯ ವಿಚಾರವನ್ನು ಪ್ರಸ್ತುತಪಡಿಸುತ್ತದೆ. ಅಂದರೆ, ಜ್ಞಾನವ್ಯವಹಾರದ ಅತ್ಯಂತ ಮುಖ್ಯ ರೂಪವಾದ ಸಾಕ್ಷಿ-ಸ್ಥಿತಿಯ ಅನ್ಯಾಯದ ಕುರಿತು ಚರ್ಚಿಸುತ್ತದೆ. ಇದರ ಮುಖ್ಯ ವಿಚಾರ ಏನೆಂದರೆ, ತನಗಿರುವ ಪೂರ್ವಾಗ್ರಹಗಳ ಕಾರಣದಿಂದ ಒಬ್ಬ ಕೇಳುಗ ತಾನು ಸಾಮಾನ್ಯವಾಗಿ ತೋರುತ್ತಿದ್ದ ನಂಬಿಕೆಗಿಂತ ಕಡಿಮೆ ಮಟ್ಟದ ನಂಬಿಕೆಯನ್ನು ಒಬ್ಬ ಸಾಕ್ಷಿಯ ಮಾತುಗಳ ಬಗ್ಗೆ ತೋರಿಸಿದರೆ, ಆಗ ಆ ಸಾಕ್ಷಿಯಾದವನು ಸಾಕ್ಷಿ-ಸ್ಥಿತಿಯ ಅನ್ಯಾಯಕ್ಕೆ ಈಡಾಗಿದ್ದಾನೆ ಎಂದರ್ಥ. ಪೂರ್ವಾಗ್ರಹಕ್ಕೆ ಹಲವು ರೂಪಗಳಿರಬಹುದಾದ್ದರಿಂದ ಸಾಕ್ಷಿ-ಸ್ಥಿತಿಯ ಅನ್ಯಾಯದ ಪರಿಕಲ್ಪನೆಯ ಅಡಿ ಹಲವು ರೀತಿಯ ಸಂಗತಿಗಳು ಬರುತ್ತವೆ. ಜನರ ಸಾಮಾಜಿಕ ಭಿನ್ನತೆಗಳ ಕಾರಣದಿಂದ ಉಂಟಾಗುವ ಪೂರ್ವಾಗ್ರಹಗಳನ್ನು ಗುರುತಿಸಲು ಅಸ್ಮಿತೆಯ ಪೂರ್ವಾಗ್ರಹ ಎಂಬ ವಿಚಾರವನ್ನು ಪರಿಚಯಿಸುತ್ತೇನೆ. ಇದು ಸಾಕ್ಷಿ-ಸ್ಥಿತಿಯ ಅನ್ಯಾಯದ ಮುಖ್ಯ ಸಂಗತಿಯ ಕುರಿತು ಗಮನ ಹರಿಸಲು ಅನುವು ಮಾಡಿಕೊಡುತ್ತದೆ. ಕೇಳುಗನ ಅಸ್ಮಿತೆಯ ಪೂರ್ವಾಗ್ರಹದ ಕಾರಣದಿಂದ ವಿಶ್ವಾಸಹೀನತೆಗೆ ಪಕ್ಕಾಗುವ ಒಬ್ಬ ಸಾಕ್ಷಿ ಅನುಭವಿಸುವ ಅನ್ಯಾಯ. ಉದಾಹರಣೆಗೆ, ಒಬ್ಬ ವ್ಯಕ್ತಿ ಕಪ್ಪು ಜನಾಂಗದವನು ಎನ್ನುವ ಕಾರಣಕ್ಕೆ ಪೊಲೀಸರು ಅವನ ಮಾತನ್ನು ನಂಬದಿರುವುದು. ಹೀಗೆ, ಸಾಕ್ಷಿ-ಸ್ಥಿತಿಯ ಅನ್ಯಾಯದ ಮುಖ್ಯ ಉದಾಹರಣೆಯನ್ನು ಸ್ವಲ್ಪ ಹ್ರಸ್ವವಾಗಿ ಹೇಳಬೇಕೆಂದರೆ, ಅದು ಅಸ್ಮಿತೆ-ಪೂರ್ವಾಗ್ರ*ಹಿತ* ವಿಶ್ವಾಸಾರ್ಹತೆಯ ಕೊರತೆ. ಈ ವಿವರಣೆ ಸಾಕ್ಷಿ-ಸ್ಥಿತಿಯ ಅನ್ಯಾಯದೊಂದಿಗೆ ಒಬ್ಬ ವ್ಯಕ್ತಿಯು ಅನುಭವಿಸಬಹುದಾದ ಇನ್ನಿತರ ಸಾಮಾಜಿಕ ಅನ್ಯಾಯಗಳನ್ನೂ ಮುನ್ನೆಲೆಗೆ ತರುತ್ತದೆ. ಅದಕ್ಕೆಂದೇ ಇದು ಒಂದು ಕೇಂದ್ರ ಉದಾಹರಣೆಯಾಗಿರುವುದು. ಸಾಮಾಜಿಕ ಅನ್ಯಾಯದ ವಿಶಾಲ ಚಿತ್ರಣದಲ್ಲಿ ಜ್ಞಾನದ ಅನ್ಯಾಯದ ನೆಲೆಯನ್ನು ತೋರಿಸುತ್ತದೆ ಎನ್ನುವ ಕಾರಣಕ್ಕೆ.

ಅಧ್ಯಾಯ ೨ ಅಸ್ಮಿತೆಯ ಪೂರ್ವಾಗ್ರಹಗಳು ಹೇಗೆ ಸಾಕ್ಷಿಗಳ ವಿಶ್ವಾಸಾರ್ಹತೆಯ ಕುರಿತ ಕೇಳುಗರ ನಿರ್ಣಯಗಳನ್ನು ಪ್ರಭಾವಿಸುತ್ತವೆ, ಮತ್ತು ಇದು ಹೆಚ್ಚಿನ ಸಂದರ್ಭಗಳಲ್ಲಿ, ಅವರಿಗಿರುವ ನಂಬಿಕೆಗಳ

ಕಾರಣದಿಂದ ಆಗುವಂಥದ್ದಲ್ಲ. ಬದಲಾಗಿ ಆ ನಂಬಿಕೆಗಳ ಹೊರತಾಗಿಯೂ ಆಗುವಂಥದ್ದು. ನನ್ನ ಪ್ರಕಾರ ಕೇಳುಗರ ವಿಶ್ವಾಸಾರ್ಹತೆಯ ನಿರ್ಣಯದೊಳಗೆ ಇಂತಹ ಪೂರ್ವಾಗ್ರಹಗಳು ಸಾಮಾನ್ಯವಾಗಿ ನುಸುಳುವುದು ಸಾಮಾಜಿಕ ಕಥನಗಳ ಮೂಲಕ, ಪೂರ್ವಾಗ್ರಹದ ರೂಢಿಗತ ನಂಬಿಕೆಗಳ ಮೂಲಕ, ಅಂದರೆ, ಒಂದು ನಿರ್ದಿಷ್ಟ ಸಾಮಾಜಿಕ ಗುಂಪಿನ ಕುರಿತ ವಿಕೃತ ಚಿತ್ರಣಗಳ ಮೂಲಕ. ತಕ್ಷಣದಲ್ಲಿ ವಿಶ್ವಾಸಾರ್ಹತೆಯ ಕುರಿತ ನಿರ್ಣಯಗಳು ನಿಂತಿರುವುದು ಕೇಳುಗರು ತಮ್ಮೆದುರಿನ ವ್ಯಕ್ತಿಯನ್ನು ಹೆಚ್ಚು ಅಥವಾ ಕಡಿಮೆ ನಂಬಿಕೆಗೆ ಅರ್ಹರು ಎಂದು ನೋಡುವುದರಲ್ಲಿ. ಹಾಗಾಗಿ, ಪೂರ್ವಾಗ್ರಹಗಳು ಒಳಸುಳಿದಾಗ, ಸಾಮಾನ್ಯವಾಗಿ ಅದು ಹೀಗೆ ನಂಬಿಕೆಗಳಿಂದ ಭಾರವಾದ ಸಾಮಾಜಿಕ ಗ್ರಹಿಕೆಗಳನ್ನು ವಿಕೃತಗೊಳಿಸುವ ಪೂರ್ವಾಗ್ರಹದ ರೂಢಮಾದರಿಗಳಿಂದ ಬರುತ್ತದೆ. ಇಂತಹ ಒಂದು ವಾದದ ಪ್ರಾಥಮಿಕ ಪ್ರಸ್ತಾಪವನ್ನು ನಾನು ಮೂರನೇ ಅಧ್ಯಾಯದಲ್ಲಿ ಮಾಡುತ್ತೇನೆ.

ಅನ್ಯಾಯದ ಕುರಿತ ಯಾವ ವಾದವಾದರೂ ಅದು ಒಂದು ಸಾಮೂಹಿಕವಾದ ನೈತಿಕ ನಂಬಿಕೆಗಳನ್ನು ಅವಲಂಬಿಸಿರುತ್ತದೆ ಎನ್ನುವುದೇನೋ ನಿಜ. ಆದರೂ, ಯಾಕೆ ಒಂದು ಸಂಗತಿ ಅನ್ಯಾಯದಿಂದ ಕೂಡಿದೆ ಎನ್ನುವುದರ ಕುರಿತು ಸ್ಪಷ್ಟತೆ ಸಿಗಬೇಕೆಂದರೆ, ಅದರಲ್ಲಿರುವ ತಪ್ಪಿನ ಲಕ್ಷಣ ಏನು ಎನ್ನುವುದನ್ನು ವಿಶ್ಲೇಷಿಸುವುದು ಅಗತ್ಯವಾಗುತ್ತದೆ. ನಾನು ತೋರಿಸುವಂತೆ, ಒಬ್ಬ ಸಾಕ್ಷಿಗೆ ಸಾಕ್ಷಿ-ಸ್ಥಿತಿಯ ಅನ್ಯಾಯವಾಗುವ ಸಂದರ್ಭ ಜ್ಞಾನವ್ಯವಹಾರಗಳಲ್ಲಿ ಸಾಮಾನ್ಯವಾಗಿ ಆಗಬಹುದಾದ ಅನ್ಯಾಯಗಳೊಂದಿಗೆ ತಳುಕು ಹಾಕಿಕೊಂಡಿರುತ್ತದೆ. ಯಾವ ಜ್ಞಾನವ್ಯವಹಾರದ ಅನ್ಯಾಯವೇ ಆಗಲೀ ಅದು ಒಬ್ಬ ವ್ಯಕ್ತಿಯನ್ನು ಜ್ಞಾತೃವಾಗಿರುವ ಅರ್ಹತೆಯಲ್ಲಿ ಅನ್ಯಾಯಕ್ಕೆ ಈಡುಮಾಡುತ್ತದೆ. ಈ ಅರ್ಹತೆ ಮನುಷ್ಯನ ಒಂದು ಅತ್ಯಗತ್ಯ ಮೌಲ್ಯ. ಸಾಕ್ಷಿ-ಸ್ಥಿತಿಯ ಅನ್ಯಾಯದ ಸಂದರ್ಭಗಳಲ್ಲಿ ಒಬ್ಬ ಕೇಳುಗ ಒಬ್ಬ ಸಾಕ್ಷಿಯ ಮಾಹಿತಿಯನ್ನು ನೀಡುವ, ಜ್ಞಾನವನ್ನು ಕೊಡುವ, ಶಕ್ತಿಯನ್ನೇ ನಗಣ್ಯ ಮಾಡುತ್ತಿದ್ದಾನೆ. ನನ್ನ ವಾದದ ಪ್ರಕಾರ ಈ ರೀತಿಯ ಅನ್ಯಾಯಕ್ಕೆ ಗುರಿಯಾವುದು ಒಂದು ಆಂತರಿಕ ಅನ್ಯಾಯಕ್ಕೆ ಉದಾಹರಣೆ. ಈ ಅನ್ಯಾಯ ಒಬ್ಬ ವ್ಯಕ್ತಿಯನ್ನು ಮಾನಸಿಕವಾಗಿ ಆಳವಾಗಿ ಪ್ರಭಾವಿಸಬಹುದು ಅಥವಾ ಅದರ ಪ್ರಭಾವ ಮೇಲುಮೇಲಿನದಾಗಿರಬಹುದು. ಆದರೆ, ಆಳವಾಗಿದ್ದ ಪಕ್ಷದಲ್ಲಿ, ಅದು ತನ್ನ ಸ್ವಯಂವಿಕಾಸಕ್ಕೇ ಎರವಾಗಬಹುದು. ಪರಿಣಾಮವಾಗಿ, ಆ ವ್ಯಕ್ತಿ ನಿಜಕ್ಕೂ ತಾನು ಏನೋ ಹಾಗೆ ಆಗಲೂ ಇದು ಅಡ್ಡಿಯಾಗಬಹುದು.

ಅಧ್ಯಾಯ ೩ರಲ್ಲಿ, ಸಾಕ್ಷಿ-ಸ್ಥಿತಿಯ ಅನ್ಯಾಯವನ್ನು ಸಾಕ್ಷಿಯ ಕುರಿತ ಜ್ಞಾನವ್ಯವಹಾರಗಳ ಸಂದರ್ಭದಲ್ಲಿ ಇಟ್ಟು ನೋಡುತ್ತೇನೆ. ಸದ್ಗುಣ-ಪ್ರತೀತ ಜ್ಞಾನಮೀಮಾಂಸೆಯ ಚೌಕಟ್ಟಿನಲ್ಲಿ ಒಂದು ಅನುಮಾನ-ಪ್ರಮಾಣವಲ್ಲದ ರೀತಿಯ ಸಾಧ್ಯತೆಯನ್ನು ಬೆಳೆಸುತ್ತಾ, ಒಬ್ಬ ಸಾಕ್ಷಿಯ ಕುರಿತು ಕೇಳುಗನ ಗ್ರಹಿಕೆ ಮತ್ತು ನೈತಿಕ ಗ್ರಹಿಕೆಯ ಶಕ್ತಿಯುಳ್ಳ ಒಬ್ಬ ಸದ್ಗುಣಶೀಲ ವ್ಯಕ್ತಿಯ ಕುರಿತ ನೈತಿಕ ಬೌದ್ಧಿಕ ಪರಿಕಲ್ಪನೆ ಇವೆರಡರ

ನಡುವಿನ ಸಮಾನತೆಗಳನ್ನು ತೋರಿಸುತ್ತೇನೆ. ಒಬ್ಬ ನೈತಿಕ ವ್ಯಕ್ತಿ ಪ್ರಪಂಚವನ್ನು ಸದಾ ನೈತಿಕವಾಗಿ ದೀಪ್ತವಾಗಿರುವಂತೆ ನೋಡುತ್ತಾನೆ ಎನ್ನುವ ಚಿತ್ರಣದ ರೀತಿಯಲ್ಲಿಯೇ, ವಿಚಾರಣೆಯ ಸಂದರ್ಭದಲ್ಲಿ ಸದ್ಗುಣಸಂಪನ್ನ ಕೇಳುಗರೂ ಕೂಡಾ ತನ್ನೆದುರಿರುವ ಸಾಕ್ಷಿಯನ್ನು ಜ್ಞಾನದಿಂದ ದೀಪ್ತವಾಗಿರುವಂತೆಯೇ ನೋಡುತ್ತಾರೆ, ಅಂದರೆ, ಅವನನ್ನು ಅಷ್ಟೋ ಇಷ್ಟೋ ಮಟ್ಟಿಗೆ ವಿಶ್ವಾಸಕ್ಕೆ ಅರ್ಹನೆಂದು ನೋಡುತ್ತಾರೆ. ಸಾಕ್ಷಿ-ಸಂವೇದನೆ ಎನ್ನುವ ಒಂದು ವಿಚಾರವನ್ನು ಪರಿಚಯಿಸುತ್ತಾ, ಅದನ್ನು ಹತ್ತು ಹಲವು ವೈಯಕ್ತಿಕ ಮತ್ತು ಸಾಮೂಹಿಕ ಸಾಕ್ಷಿ-ಸಂದರ್ಭಗಳ ಅನುಭವಗಳಿಂದ ಸಾಮಾಜಿಕವಾಗಿ ರೂಪಿಸಬಹುದಾದ ಮತ್ತು ಕಲಿಸಬಹುದಾದ ಒಂದು ಬೌದ್ಧಿಕ ಸೂಕ್ಷ್ಮಜ್ಞತೆ ಎಂದೂ ಚಿತ್ರಿಸುತ್ತೇನೆ. ಇಂತಹ ನಿಜಜೀವನದ ಕಲಿಕೆಯು ಒಬ್ಬ ಸದ್ಗುಣಸಂಪನ್ನ ಕೇಳುಗನಲ್ಲಿ ಜ್ಞಾನದಿಂದ ದೀಪ್ತವಾದ ಸಾಮಾಜಿಕ ಗ್ರಹಿಕೆಗಳ ಕೆಲವು ನಿತ್ಯಜೀವನದ ಸದೃಢ ರೂಢಿಗಳನ್ನು ರೂಪಿಸುತ್ತದೆ. ಆ ಮೂಲಕ ಸಾಕ್ಷಿಗಳ ವಿಶ್ವಾಸಾರ್ಹತೆಯ ಕುರಿತು ನಂಬಲರ್ಹವಾದ ಗ್ರಹಿಕೆಯ ನಿರ್ಣಯಗಳನ್ನು ರೂಪಿಸುವಲ್ಲಿ ಸಹಾಯ ಮಾಡುತ್ತದೆ. ಆದರೆ, ಕೇಳುಗರಾಗಿ ನಮ್ಮ ಸಮಸ್ಯೆ ಏನೆಂದರೆ, ವೈಯಕ್ತಿಕವಾಗಿ ನಾವು ಪೂರ್ವಾಗ್ರಹದ ನಂಬಿಕೆಗಳ ದೋಷಕ್ಕೆ ಪಕ್ಕಾಗದಿದ್ದರೂ ಸಾಕ್ಷಿಗಳ ವಿಶ್ವಾಸಾರ್ಹತೆಯನ್ನು ನಿರ್ಣಯಿಸಬೇಕಾದ ಸಾಮಾಜಿಕ ಪರಿಸರ ಯಾವ ರೀತಿಯದ್ದೆಂದರೆ, ಅದರಲ್ಲಿ ನಮ್ಮ ನಿರ್ಣಯಗಳನ್ನು ವಿಕೃತಗೊಳಿಸುವ ಹಲವಾರು ಬಿಡಿಬಿಡಿಯಾದ ಪೂರ್ವಾಗ್ರಹಗಳು ಅನಿವಾರ್ಯವಾಗಿ ಉಳಿದುಕೊಂಡುಬಿಟ್ಟಿರುತ್ತವೆ. ಹಾಗಾಗಿ ಒಬ್ಬ ಸದ್ಗುಣಸಂಪನ್ನ ಕೇಳುಗನ ಪ್ರಾಥಮಿಕ ಪರಿಕಲ್ಪನೆ ಯಾವುದೆಂದರೆ, ಅಂಥವರು ತಮ್ಮ ವಿಶ್ವಾಸಾರ್ಹತೆಯ ನಿರ್ಣಯಗಳಲ್ಲಿ ನುಸುಳಬಹುದಾದ ಪೂರ್ವಾಗ್ರಹಗಳ ಪ್ರಭಾವವನ್ನು ತಿದ್ದಿಕೊಳ್ಳುವ ಶಕ್ತಿಯನ್ನು ಹೊಂದಿದವರಾಗಿರಬೇಕು. ಇಂತಹ ಸದ್ಗುಣಸಂಪನ್ನ ಕೇಳುಗರ ಪರಿಕಲ್ಪನೆಯನ್ನು ಚಿತ್ರಿಸಿದ ನಂತರ, ಅಧ್ಯಾಯ ೪ರಲ್ಲಿ ನಾನು ಒಂದು ನಿರ್ದಿಷ್ಟ ಸಾಕ್ಷಿ-ಸ್ಥಿತಿಯ ಸದ್ಗುಣವನ್ನು ತೋರಿಸಲು ತೊಡಗುತ್ತೇನೆ. ಅದೇನೆಂದರೆ, ಸಾಕ್ಷಿ-ಸ್ಥಿತಿಯ ನ್ಯಾಯದ ಸದ್ಗುಣ. ಅಂದರೆ, ಕೇಳುಗರ ವಿಶ್ವಾಸಾರ್ಹತೆಯ ನಿರ್ಣಯಗಳಲ್ಲಿ ಇರಬಹುದಾದ ಅಸ್ಮಿತೆಯ ಪೂರ್ವಾಗ್ರಹಗಳ ಪ್ರಭಾವವನ್ನು ಗುರುತಿಸುವ ಮತ್ತು ಸರಿಪಡಿಸುವ ಗುಣ. ಈ ಗುಣದ ಚಾರಿತ್ರಿಕ ಹುಟ್ಟಿನ ವಿವರಗಳನ್ನು ಅಧ್ಯಾಯ ೫ರಲ್ಲಿ ಚಿತ್ರಿಸಲಾಗಿದೆ. ಬರ್ನಾರ್ಡ್ ವಿಲಿಯಮ್ಸ್ ಮತ್ತು ನಂತರ ಎಡ್ವರ್ಡ್ ಕ್ರೇಗ್ ರ ಪ್ರಾಕೃತಿಕ ಸ್ಥಿತಿಯ ಜ್ಞಾನಕ್ಕೆ ಸಂಬಂಧಿಸಿದ ಕತೆಗಳನ್ನು ಬಳಸಿಕೊಂಡು, ಪ್ರಕೃತಿಯ ಸ್ಥಿತಿಯಲ್ಲಿ ಸಾಕ್ಷಿ-ಸ್ಥಿತಿಯ ನ್ಯಾಯ ಎನ್ನುವುದು ಮೂಲದಲ್ಲಿ ಸತ್ಯದ ಗುಣ ಎಂದು ವ್ಯಕ್ತಿಗೊಳ್ಳುತ್ತದೆ ಎಂದು ನಾನು ವಾದಿಸುತ್ತೇನೆ. ಈ ಗುಣದ ರೂಪವನ್ನು ನಂತರ ನಿರ್ದಿಷ್ಟಗೊಳಿಸಿಕೊಂಡಾಗ ಅದು ಒಂದು ಮಿಶ್ರರೂಪ ಎಂದು ತಿಳಿವಿಗೆ ಬರುತ್ತದೆ: ಅಂದರೆ, ಬೌದ್ಧಿಕ ಮತ್ತು ನೈತಿಕ ಈ ಎರಡೂ ರೂಪದ್ದು ಎಂದು.

ಅಧ್ಯಾಯ ೬ರಲ್ಲಿ ಸಾಕ್ಷಿ-ಸ್ಥಿತಿಯ ಅನ್ಯಾಯಗಳು ಉಂಟುಮಾಡುವ ತಪ್ಪನ್ನು ಕುರಿತು ಪುನಃ ಚರ್ಚಿಸುತ್ತೇನೆ. ಈ ಬಾರಿ ಅದನ್ನು ಜ್ಞಾನದ ಪರಿಕಲ್ಪನೆಯ ಉಗಮಕ್ಕೆ ಸಂಬಂಧಿಸಿದ ಪ್ರಾಕೃತಿಕ ಸ್ಥಿತಿಯ ಕತೆಗಳನ್ನು

ಪರೀಕ್ಷಿಸುತ್ತಾ ಮಾಡುತ್ತೇನೆ. ಈ ತಪ್ಪನ್ನು ಜ್ಞಾನಕ್ಕೆ ವಸ್ತುರೂಪವನ್ನು ಆರೋಪಿಸುವುದರಿಂದ ಉಂಟಾಗುವ ತಪ್ಪು ಎಂದು ಅರ್ಥೈಸಿಕೊಳ್ಳಬಹುದು ಎನ್ನುವುದು ನನ್ನ ವಾದ. ಇದನ್ನು ನಾನು ಸ್ತ್ರೀವಾದಿ ಚಿಂತನೆಯಲ್ಲಿರುವ ಲೈಂಗಿಕತೆಗೆ ವಸ್ತುರೂಪವನ್ನು ಆರೋಪಿಸುವುದರ ಕುರಿತ ವಿಮರ್ಶೆಗೆ ಸಮರೂಪವಾಗಿ ಮತ್ತು ಆ ಮೂಲಕ ಉಂಟಾಗುವ ಮೂಕಸ್ಥಿತಿಗೆ ಹೋಲಿಕೆಯಾಗಿ ನೋಡುತ್ತೇನೆ. ಕ್ರೇಗ್‌ನ ಜ್ಞಾನದ ಕುರಿತ ಪ್ರಾಯೋಗಿಕ ವಿವರಣೆಯ ಪರಿಣಾಮವಾಗಿ ಸಾಕ್ಷಿಸ್ಥಿತಿಯ ಅನ್ಯಾಯ ಎನ್ನುವುದು ನಾವು ಈವರೆಗೂ ನೋಡಿರುವುದಕ್ಕಿಂತಲೂ ಆಳವಾಗಿ ಘಾಸಿ ಮಾಡುತ್ತದೆ ಎಂದು ವಾದಿಸುತ್ತೇನೆ. ಅಂದರೆ, ತಿಳಿಯುವುದು ಎಂದರೆ ಏನು ಎನ್ನುವ ವ್ಯವಹಾರದ ನಟ್ಟನಡುವಿನಿಂದಲೇ ಇದು ನಮ್ಮನ್ನು ಹೊರಗಿಡುತ್ತದೆ.

ಕೊನೆಗೆ, ಅಧ್ಯಾಯ ೭ರಲ್ಲಿ ಎರಡನೆಯ ರೀತಿಯ ಜ್ಞಾನದ ಅನ್ಯಾಯ, ವ್ಯಾಖ್ಯಾನ-ಸ್ಥಿತಿಯ ಅನ್ಯಾಯವನ್ನು ಪರೀಕ್ಷಿಸುತ್ತೇನೆ. ಈ ರೀತಿಯ ಅನ್ಯಾಯದ ಮುಖ್ಯ ಉದಾಹರಣೆ ಎಂದರೆ ಲೈಂಗಿಕ ಕಿರುಕುಳದ ಕುರಿತ ಪರಿಕಲ್ಪನೆ ಹುಟ್ಟುವುದಕ್ಕಿಂತಲೂ ಮುಂಚಿನ ಕಾಲದಲ್ಲಿ ಲೈಂಗಿಕ ಕಿರುಕುಳ ಅನುಭವಿಸುವ ಮಹಿಳೆಯದ್ದು. ಈ ಸ್ಥಿತಿಯಲ್ಲಿ, ಅವಳಿಗೆ ತನ್ನ ಅನುಭವವನ್ನು ಇತರರಿಗೆ ಅರ್ಥಪೂರ್ಣವಾಗಿ ವಿವರಿಸುವುದಿರಲಿ, ತನ್ನ ಮಟ್ಟಿಗೇ ಅದನ್ನು ಸರಿಯಾಗಿ ಅರ್ಥೈಸಿಕೊಳ್ಳಲೂ ಸಾಧ್ಯವಿಲ್ಲ. ಈ ರೀತಿಯ ಜ್ಞಾನದ ಅನ್ಯಾಯ ಹುಟ್ಟುವುದು ಸಾಮೂಹಿಕವಾಗಿ ನಮ್ಮ ವ್ಯಾಖ್ಯಾನದ ಸಂಪನ್ಮೂಲಗಳ ಕೊರತೆಯಿಂದ ಎಂದು ನಾನು ವಿವರಿಸುತ್ತೇನೆ. ಇದು ಎಲ್ಲರಿಗೂ ಲಭ್ಯವಿರಬೇಕಾದ ಸಾಮಾಜಿಕ ವ್ಯಾಖ್ಯಾನಗಳ ಕೊರತೆ. ಸ್ವಾಭಾವಿಕವಾಗಿಯೇ ಇಂಥ ಕೊರತೆಯಿಂದ ಉಂಟಾಗುವ ಕೆಡುಕು ಮಾತ್ರ ಬೇರೆಬೇರೆ ಸಾಮಾಜಿಕ ಗುಂಪುಗಳಿಗೆ ಬೇರೆಬೇರೆಯಾಗಿರುತ್ತದೆ. ಅಥವಾ, ಈ ಅಸಮವಾದ ಕೆಡುಕು ಯಾಕೆಂದರೆ, ಈ ಕೊರತೆಗೆ ಈಡಾಗಿರುವ ಗುಂಪಿನ ಜನರು, ಒಂದು ಮಟ್ಟಿಗೆ ವ್ಯಾಖ್ಯಾನದ ಅಧಿಕಾರದಿಂದಲೂ ದೂರವಾಗಿರುತ್ತಾರೆ. ಅಥವಾ, ಸಾಮಾಜಿಕ ಅರ್ಥಗಳು ಸ್ಥಾಪಿತವಾಗುವ ಪ್ರಕ್ರಿಯೆಗಳಲ್ಲಿ ಅವರ ಭಾಗೀದಾರಿ ಅಸಮವಾಗಿರುತ್ತದೆ. ಈ ರೀತಿಯ ದೂರದಿಂದ ಉಂಟಾಗುವ ಪರಿಣಾಮವೆಂದರೆ ಸಾಮುದಾಯಿಕವಾಗಿ ನಮಗಿರುವ ತಿಳಿವಿನ ಸಾಧ್ಯತೆಗಳು ವಸ್ತುವಿನ ಮಟ್ಟದಲ್ಲೂ ಮತ್ತು ವಿನ್ಯಾಸದ ಮಟ್ಟದಲ್ಲೂ ವ್ಯವಸ್ಥಿತವಾಗಿ ಪೂರ್ವಾಗ್ರಹಕ್ಕೆ ಪಕ್ಕಾಗುತ್ತವೆ. ಹೀಗೆ ಸಾಮುದಾಯಿಕ ಅರ್ಥಪ್ರಕ್ರಿಯೆಗಳಿಂದ ದೂರವಾಗಿರುವ ಜನರ ಸಾಮಾಜಿಕ ಅನುಭವಗಳೂ ಕೂಡಾ ಅಸಮರ್ಪಕವಾಗಿ ವ್ಯಕ್ತಗೊಳ್ಳುತ್ತದೆ ಮತ್ತು ಹಾಗಾಗಿ ಇತರರು, ಮತ್ತು ಕೆಲವೊಮ್ಮೆ, ಸ್ವತಃ ತಾವೂ ಅದನ್ನು ಸರಿಯಾಗಿ ಅರಿಯುವುದೂ ಕಷ್ಟವಾಗುತ್ತದೆ. ಹಾಗೆಯೇ ಇಂತಹ ಗುಂಪುಗಳಿಗೆ ಒಂದು ವೇಳೆ ತಾವು ಹೇಳಬೇಕಾದ ಅನುಭವಗಳ ಮೇಲೆ ಹಿಡಿತ ಇದ್ದರೂ, ಅವರುಗಳ ಹೇಳುವ ಶೈಲಿ ಇತರರಿಗೆ ಅರ್ಥವಾಗದ ಕಾರಣ, ಆ ಅನುಭವಗಳನ್ನೇ ಅಸಂಗತವಾದದ್ದು ಎಂದು ನಿರಾಕರಿಸುವ ಸಾಧ್ಯತೆಯೂ ಇದೆ. ಸಾಕ್ಷಿ-ಸ್ಥಿತಿಯ ಅನ್ಯಾಯದ ಚರ್ಚೆಯಂತೆಯೇ, ಇಲ್ಲಿಯೂ ಒಬ್ಬ ವ್ಯಕ್ತಿಗೆ ಉಂಟಾಗುವ ಅನ್ಯಾವನ್ನು ಅರ್ಥೈಸಿಕೊಳ್ಳುವ ಒಂದು ಚೌಕಟ್ಟನ್ನು ನಾನು ನೀಡುತ್ತೇನೆ. ವ್ಯಾಖ್ಯಾನ ಸ್ಥಿತಿಯ

ಅನ್ಯಾಯವನ್ನು ಅನುಭವಿಸುವುದೆಂದರೆ, ಮುಖ್ಯವಾಗಿ, ಒಂದು ಸಾಂದರ್ಭಿಕ ವ್ಯಾಖ್ಯಾನ ಅಸಮಾನತೆಗೆ ಈಡಾಗುವುದು ಎಂದರ್ಥ. ಅವರ ಸಾಮಾಜಿಕ ಸ್ಥಿತಿ ಯಾವ ರೀತಿಯದ್ದೆಂದರೆ, ಒಂದು ಸಾಮುದಾಯಿಕ ವ್ಯಾಖ್ಯಾನದ ಕೊರತೆಯಿಂದ ನಿರ್ದಿಷ್ಟವಾಗಿ ಈ ವ್ಯಕ್ತಿಗೆ ತಮ್ಮ ಯಾವ ಅನುಭವವನ್ನು ಸರಿಯಾಗಿ ಅರ್ಥೈಸಿಕೊಳ್ಳುವುದು ಮುಖ್ಯವೋ ಅದೇ ಅನುಭವವನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ವ್ಯಾಖ್ಯಾನ ಸ್ಥಿತಿಯ ಅನ್ಯಾಯಗಳನ್ನು ವ್ಯಕ್ತಿಗಳು ಹುಟ್ಟುಹಾಕುವುದಿಲ್ಲವಾದರೂ, ಅದು ಸಾಮಾನ್ಯವಾಗಿ ವ್ಯಕ್ತಿ-ವ್ಯಕ್ತಿಗಳ ನಡುವಿನ ಮಾತುಕತೆಗಳಲ್ಲಿ ತೋರಗೊಡುತ್ತದೆ. ಹಾಗಾಗಿ, ಇಂತಹ ಸಂದರ್ಭಗಳಲ್ಲಿ ಕೇಳುಗನಲ್ಲಿ ಯಾವ ರೀತಿಯ ಎಚ್ಚರ ಅಥವಾ ಸದ್ಗುಣ ಇರಬೇಕು ಎಂದು ತಿಳಿಯುವುದು ಅಗತ್ಯ. ಒಬ್ಬ ವ್ಯಕ್ತಿಗೆ ಇನ್ನೊಬ್ಬರ ಕುರಿತು ಮೊದಲ ಮುಖಾಮುಖಿಯಲ್ಲೇ ಅವಿಶ್ವಾಸದ ಭಾವನೆ ಹುಟ್ಟಿದರೆ, ಅದಕ್ಕೆ ಕಾರಣ ಆ ಎರಡನೇ ವ್ಯಕ್ತಿಯ ಮಾತುಗಾರಿಕೆಯಲ್ಲಿ ಇಂತಹ ವ್ಯಾಖ್ಯಾನಸ್ಥಿತಿಯ ಅನ್ಯಾಯದ ಪರಿಮಣಾಗಳು ಗೋಚರಿಸುತ್ತಿರುವುದು. ಅದಕ್ಕೆ ಕೇಳುಗನನ್ನು ದೂಷಿಸಿ ಪ್ರಯೋಜನವಿಲ್ಲ. ಏಕೆಂದರೆ, ಇಲ್ಲಿ ಇಬ್ಬರೂ ಒಂದೇ ರೀತಿಯ ವ್ಯಾಖ್ಯಾನದ ಸಂಪನ್ಮೂಲಗಳ ಕೊರತೆಗೆ ಈಡಾಗಿದ್ದಾರೆ. ಇಷ್ಟಾಗಿಯೂ ಪರಸ್ಪರ ಅರಿವಿನ ಜ್ಞಾನದ ಗುರಿ ಈಡೇರಬೇಕೆಂದರೆ, ಕೇಳುಗನ ಸಾಕ್ಷಿಯನ್ನು ಸ್ವೀಕರಿಸುವ ಸಂವೇದನೆ ವ್ಯಾಖ್ಯಾನದ ನ್ಯಾಯದಿಂದ ಪ್ರಭಾವಿತವಾಗಬೇಕು ಎಂದು ಅಪೇಕ್ಷಿಸುವುದು ತಪ್ಪಲ್ಲ. ಈ ಗುಣ ಯಾವ ರೀತಿಯದ್ದೆಂದರೆ, ಕೇಳುಗನು ಒಂದು ಆತ್ಮಾವಲೋಕನದ ರೀತಿಯ ಸೂಕ್ಷ್ಮಜ್ಞತೆಯ ಮೂಲಕ, ಎದುರಿನವನನ್ನು ಅರ್ಥ ಮಾಡಿಕೊಳ್ಳುವಲ್ಲಿ ಸಾಮುದಾಯಿಕವಾಗಿ ವ್ಯಾಖ್ಯಾನದ ಸಂಪನ್ಮೂಲಗಳ ಕೊರತೆಯ ಕಾರಣದಿಂದ ಏನಾದರೂ ಕೊರೆ ಉಂಟಾಗಿದೆಯೇ ಎಂದು ಸದಾ ಗಮನಿಸಬೇಕು. ಅಂದರೆ, ಎದುರಿಗಿರುವ ಸಾಕ್ಷಿಯ ಮಾತುಗಳು ಅರ್ಥವಾಗದೆ ಇರುವುದಕ್ಕೆ ನಮ್ಮ ವ್ಯಾಖ್ಯಾನದ ಸಾಮುದಾಯಿಕ ಸಂಪನ್ಮೂಲಗಳಲ್ಲಿ ಇರುವ ಕೊರತೆಯೂ ಒಂದು ಕಾರಣ ಎನ್ನುವ ಸಾಧ್ಯತೆಗೆ ತೆರೆದುಕೊಳ್ಳಬೇಕು. ಮತ್ತು ಅದಕ್ಕೆ ತಕ್ಕಂತೆ ತನ್ನ ವಿಶಾಸಾರ್ಹತೆಯ ಕುರಿತ ನಿರ್ಣಯಗಳನ್ನು ಒಂದೋ ಸರಿದೂಗಿಸಬೇಕು ಇಲ್ಲವೇ ಬಿಟ್ಟುಕೊಡಬೇಕು. ಮೇಲ್ನೋಟಕ್ಕೆ, ಇದು ಒಂದು ಬೌದ್ಧಿಕ ಸದ್ಗುಣವೇ ಹೊರತೂ ನೈತಿಕವಾದದ್ದಲ್ಲ ಎಂದು ತೋರಬಹುದು. ಆದರೆ, ಈ ಗುಣ ಒಂದು ನೈತಿಕ ಗುಣವೂ ಹೌದು ಎಂದು ತಿಳಿವಿಗೆ ಬರುತ್ತದೆ. ಸಾಕ್ಷಿ-ಸ್ಥಿತಿಯ ನ್ಯಾಯದಂತೆ, ವ್ಯಾಖ್ಯಾನ-ಸ್ಥಿತಿಯ ನ್ಯಾಯದ ಗುಣವೂ ಒಂದು ಸಂಕೀರ್ಣವಾದ ಅಥವಾ ಮಿಶ್ರ ರೀತಿಯ ನ್ಯಾಯ.

ಈ ಪುಸ್ತಕದ ಮುಖ್ಯ ಉದ್ದೇಶವೆಂದರೆ ಎರಡು ರೀತಿಯ ಜ್ಞಾನದ ಅನ್ಯಾಯಗಳನ್ನು ಚಿತ್ರಿಸುವುದು. ಸಾಕ್ಷಿ-ಸ್ಥಿತಿಯ ಅನ್ಯಾಯ, ಜ್ಞಾನವನ್ನು ಕೊಡುವ ಸ್ಥಾನದಲ್ಲಿರುವ ವ್ಯಕ್ತಿಗೆ ಆಗುವ ಅನ್ಯಾಯ; ಮತ್ತು ವ್ಯಾಖ್ಯಾನ-ಸ್ಥಿತಿಯ ಅನ್ಯಾಯ, ಸಾಮಾಜಿಕವಾಗಿ ಇತರರು ಅರಿಯಬೇಕಾದ ವ್ಯಕ್ತಿಗೆ ಆಗುವ ಅನ್ಯಾಯ. ಅನ್ಯಾಯದ ಈ ಸಹಜ ರೀತಿಗಳನ್ನು ಗಮನಿಸುವುದರಿಂದ ತಾತ್ವಿಕವಾಗಿ ಬಹಳಷ್ಟು ಪ್ರಯೋಜನವಿದೆ ಎಂದು ನನ್ನ ಅಭಿಪ್ರಾಯ. ಅದರಲ್ಲಿ ಒಂದು ಇಂತಹ ಅನ್ಯಾಯದ ವಿರುದ್ಧ ನಮ್ಮ ಆಚಾರವಿಚಾರಗಳನ್ನು

ರೂಪಿಸುಕೊಳ್ಳುವುದಕ್ಕೆ ಬೇಕಾದ ತಿಳಿವಳಿಕೆ ಹೆಚ್ಚಾಗುವುದು ಮುಖ್ಯವಾದದ್ದು. ಈ ಆಶಾಭಾವನೆಯೇ ಎರಡು ನೈತಿಕ-ಬೌದ್ಧಿಕ ಸದ್ಗುಣಗಳನ್ನು ಕುರಿತ ಚರ್ಚೆಗೆ ದಾರಿಮಾಡಿಕೊಡುವುದು. ಇವು ಜ್ಞಾನದ ಕರ್ತೃವಾಗಿ ಮತ್ತು ಜ್ಞಾನದ ವಸ್ತುವಾಗಿ ನಮ್ಮ ಜೀವನವನ್ನು ಉತ್ತಮಗೊಳಿಸಲು ಇರುವ ಸೂತ್ರಗಳು. ಜ್ಞಾನದ ಅನ್ಯಾಯಗಳು ಅಸಮವಾದ ಅಧಿಕಾರದ ವ್ಯವಸ್ಥೆಗಳಿಂದ ಮತ್ತು ವ್ಯವಸ್ಥಿತವಾಗಿ ಅವು ಉಂಟುಮಾಡುವ ಪೂರ್ವಾಗ್ರಹಗಳಿಂದ ಹುಟ್ಟುವುದರಿಂದ, ವೈಯಕ್ತಿಕ ಮಟ್ಟದಲ್ಲಿ ಇಂಥ ಸದ್ಗುಣಗಳು ಎಷ್ಟನ್ನು ತಾನೇ ಸಾಧಿಸಲು ಸಾಧ್ಯ ಎನ್ನುವ ಪ್ರಶ್ನೆಯೂ ಇದೆ. ಇಂತಹ ಅನ್ಯಾಯಗಳನ್ನು ಶಮನ ಮಾಡಲು ಕೇವಲ ಇನ್ನೂ ಹೆಚ್ಚಿನ ಜನ ಸದ್ಗುಣ ಸಂಪನ್ನ ಕೇಳುಗರು ಇದ್ದಾರೆ ಸಾಲದು. ಅದಕ್ಕೆ ಸಾಮುದಾಯಿಕವಾದ ಸಾಮಾಜಿಕ ರಾಜಕೀಯ ಬದಲಾವಣೆಯ ಅಗತ್ಯವೂ ಇದೆ. ಜ್ಞಾನದ ಅನ್ಯಾಯದ ಕುರಿತುನಿತ್ ಹೇಳಬೇಕೆಂದರೆ, ನೈತಿಕವೂ ರಾಜಕೀಯವೇ. ಆದಾಗ್ಯೂ, ಇದು ಏನು ತೋರಿಸುತ್ತಿದೆ ಎಂದರೆ, ಸಾಕ್ಷಿ-ಸ್ಥಿತಿ ಮತ್ತು ವ್ಯಾಖ್ಯಾನ-ಸ್ಥಿತಿಯ ಅನ್ಯಾಯಗಳನ್ನು ಮೊದಲು ನೈತಿಕ ಸಮಸ್ಯೆಗಳೆಂದು ನೋಡಬೇಕು. ಏಕೆಂದರೆ, ಮೂಲದಲ್ಲಿ ಅವು ನೈತಿಕ ಸಮಸ್ಯೆಗಳೇ ಸರಿ. ಈ ಸಮಸ್ಯೆಗಳ ತಾತ್ವಿಕ ತಿಳುವಳಿಕೆಯ ದೃಷ್ಟಿಯಿಂದ ನೋಡಿದರೆ, ರಾಜಕೀಯವಾದದ್ದು ನೈತಿಕವಾದದ್ದರ ಮೇಲೆ ಅವಲಂಬಿತವಾಗಿದೆ.